# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 45/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಸತೀಶ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಕೆಂಪಚಾರಿ | | 07.10.2023 |
| ವಯಸ್ಸು | ಃ 48 ವರ್ಷ | | |
| ವೃತ್ತಿ | ಃ ಬಟ್ಟೆ ವ್ಯಾಪಾರ | ಪ್ರಾ.ಸಾ. ಃ | 10 |
| ವಾಸಸ್ಥಳ | ಃ ಕೆ.ಜಿ.ಕೊಪ್ಪಲು | ಚಾ.ಸಾ. ಃ | 13 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಮೈಸೂರಿನ ಒಲಂಪಿಯಾ ತಿಯೇಟರ್ ಬಳಿ ತಳ್ಳುವ ಗಾಡಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತೇನೆ. ನಾನು ಆಯಾ ಸಿಸನ್ ಗೆ ತಕ್ಕಂತೆ ರೆಡಿಮೇಡ್ ಬಟ್ಟೆಗಳನ್ನು ಮಾರುತ್ತೇನೆ. ಈಗ 3 ವರ್ಷಗಳ ಹಿಂದೆ ಒಂದು ದಿನ ಇಬ್ಬರು ವ್ಯಕ್ತಿಗಳು ಒಂದು ಸೆಟ್ (ಎರಡು) ಉಲ್ಲನ್ ಹ್ಯಾಂಡ್ ಗ್ಲೌಸ್ ಗಳನ್ನು ಖರೀದಿ ಮಾಡಿದ್ದರು. ನಂತರ ಪೋಲೀಸರು ಆ ಇಬ್ಬರು ವ್ಯಕ್ತಿಗಳನ್ನು ನನ್ನ ಬಳಿ ಕರೆದುಕೊಂಡು ಬಂದು ಅವರು ಕೊಲೆ ಮಾಡುವುದಕ್ಕೆ ನನ್ನ ಬಳಿ ಖರೀದಿ ಮಾಡಿದ್ದ ಹ್ಯಾಂಡ್ ಗ್ಲೌಸ್ ಅನ್ನು ಉಪಯೋಗಿಸಿದ್ದಾಗಿ ತಿಳಿಸಿದ್ದರು. ಆ ಕಾಲಕ್ಕೆ ಆ ಇಬ್ಬರು ವ್ಯಕ್ತಿಗಳನ್ನು ನನಗೆ ತೋರಿಸಿದ್ದರು. ಆ ಕಾಲಕ್ಕೆ ಆ ಇಬ್ಬರ ವ್ಯಕ್ತಿಗಳ ಹೆಸರನ್ನು ಹೇಳಿದ್ದರು ಈಗ ನನಗೆ ನಿರಂಜನ ಎನ್ನುವ ಒಬ್ಬ ವ್ಯಕ್ತಿಯ ಹೆಸರು ನೆನಪಿದೆ ಇನ್ನೊಬ್ಬ ವ್ಯಕ್ತಿಯ ಹೆಸರು ನೆನಪಿಲ್ಲ. ಆ ವ್ಯಕ್ತಿಗಳು ನನ್ನಿಂದ 80 ರೂಪಾಯಿಗೆ ಹ್ಯಾಂಡ್ ಗ್ಲೌಸ್ ಅನ್ನು ಖರೀದಿ ಮಾಡಿದ್ದರು. ಆ ಹ್ಯಾಂಡ್ ಗ್ಲೌಸ್ ಖರೀದಿ ಮಾಡಿದಾಗ ಆ ವ್ಯಕ್ತಿಗಳು ಹಾಕಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನನ್ನಿಂದ ಖರೀದಿ ಮಾಡಿದ್ದ ಹ್ಯಾಂಡ್ ಗ್ಲೌಸ್ ಅನ್ನು

ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ 9 ಮತ್ತು ಇನ್ನೂ 3 ಹ್ಯಾಂಡ್ ಗ್ಲೌಸ್ ಗಳು ನನ್ನಿಂದ ಖರೀದಿ ಮಾಡಿದ್ದ ಹ್ಯಾಂಡ್ ಗ್ಲೌಸ್ ಗಳು ಇವೆ. ಸದರಿ ಇನ್ನೂ 3 ಹ್ಯಾಂಡ್ ಗ್ಲೌಸ್ ಗಳ ಪೈಕಿ ಪಿ.ಎಫ್–85/2020 ರ ಕ್ರಮ ಸಂಖ್ಯೆ 3 ರ 2 ಹ್ಯಾಂಡ್ ಗ್ಲೌಸ್ ಗಳನ್ನು ಎಂ.ಒ 13 ಮತ್ತು ಕ್ರಮ ಸಂಖ್ಯೆ 4 ರ 1 ಹ್ಯಾಂಡ್ ಗ್ಲೌಸ್ ಅನ್ನು ಎಂ.ಒ 14 ಎಂದು ಗುರುತಿಸಿದೆ. ಕೋರ್ಟ್ ಮುಂದೆ ಇರುವ ಆರೋಪಿತರ ಪೈಕಿ ನನ್ನಿಂದ ಹ್ಯಾಂಡ್ ಗ್ಲೌಸ್ ಖರೀದಿ ಮಾಡಿದ್ದು ಯಾರು ಎಂದು ಈಗ ಗುರುತಿಸಲು ಆಗುವುದಿಲ್ಲ. ಈ ಮೊದಲು ನಾನು ಒಂದ ಸೆಟ್ ಹ್ಯಾಂಡ್ ಗ್ಲೌಸ್ ಖರೀದಿ ಮಾಡಿದ್ದು ಎಂದು ಗೊತ್ತಿಲ್ಲದೇ ಹೇಳಿದ್ದೆ ಈಗ ಆ ಹ್ಯಾಂಡ್ ಗ್ಲೌಸ್ ಗಳನ್ನು ನೋಡಿದಾಗ ಅವರು ಆ ದಿನ 2 ಸೆಟ್ ಹ್ಯಾಂಡ್ ಗ್ಲೌಸ್ ಗಳನ್ನು ಖರೀದಿ ಮಾಡಿದ್ದರು ಎಂದು ಹೇಳುತ್ತಿದ್ದೇನೆ. ಪೋಲೀಸರ ಮುಂದೆ ಈ ಕುರಿತು ಹೇಳಿಕೆ ಕೊಟ್ಟಿದ್ದೇನೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. ಈಗ ಕೋರ್ಟ್ ಮುಂದೆ ಇರುವ 1 ಮತ್ತು 2 ನೇ ಆರೋಪಿತರೇ ಆ ದಿನ ನನ್ನ ಅಂಗಡಿಯಿಂದ ಹ್ಯಾಂಡ್ ಗ್ಲೌಸ್ ಗಳನ್ನು ಖರೀದಿ ಮಾಡಿದ್ದ ವ್ಯಕ್ತಿಗಳು ಇರುತ್ತಾರೆ ಎಂದರೆ ನಿಜ. ಆ ದಿನ ಕೋರ್ಟ್ ಮುಂದೆ ಇರುವ 1 ನೇ ಆರೋಪಿತ ಈಗ ನನಗೆ ತೋರಿಸುತ್ತಿರುವ ನೀಲಿ ಬಣ್ಣದ ಶರ್ಟ್ ಮತ್ತು ಹಸಿರು ಬಣ್ಣದ ನೈಟ್ ಪ್ಯಾಂಟ್ ಧರಿಸಿದ್ದರು ಎಂದರೆ ಇರಬಹುದು. ಸದರಿ ಬಟ್ಟೆಗಳನ್ನು ಎಂ.ಒ 15 ಮತ್ತು 16 ಎಂದು ಗುರುತಿಸಿದೆ. 2 ನೇ ಆರೋಪಿತ ನಿರಂಜನ ಆ ದಿನ

ಈಗ ನನಗೆ ತೋರಿಸುತ್ತಿರುವ ಜರ್ಕಿನ್ ಮತ್ತು ಖಾಕಿ ಪ್ಯಾಂಟ್ ಅನ್ನು ಧರಿಸಿದ್ದರು ಎಂದರೆ ಇರಬಹುದು. ಸದರಿ ಜರ್ಕಿನ್ ಮತ್ತು ಖಾಕಿ ಪ್ಯಾಂಟ್ ಅನ್ನು ಎಂ.ಓ *17* ಮತ್ತು *18* ಎಂದು ಗುರುತಿಸಿದೆ. ಆ ದಿನ ನಮ್ಮ ಅಂಗಡಿಯಿಂದ ಎರಡು ಜೊತೆ ಹ್ಯಾಂಡ್ ಗ್ಲೌಸ್ ಗಳನ್ನು ಖರೀದಿ ಮಾಡಿದ್ದರು ಎಂದರೆ ನಿಜ. ಆ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದ ಎಂದರೆ ನಿಜ.

<u>ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-</u>

*3.* ನನಗೆ ಒಲಂಪಿಯಾ ತಿಯೇಟರ್ ಬಳಿ ಅಂಗಡಿ ಇಲ್ಲ ಎಂದರೆ ನಿಜ. ಒಲಂಪಿಯಾ ತಿಯೇಟರ್ ಅಕ್ಕಪಕ್ಕದಲ್ಲಿ ಗಾಡಿ ನಿಲ್ಲಿಸಿ ವ್ಯಾಪಾರ ಮಾಡಲು ಪೋಲೀಸರ ಸಹಕಾರ ಬೇಕು ಎಂದರೆ ಸರಿಯಲ್ಲ. ನಾನು ತಳ್ಳುವ ಗಾಡಿ ವ್ಯಾಪಾರ ಮಾಡಲು ಕಾರ್ಪೋರೇಷನ್ ಲೈಸನ್ಸ್ ಪಡೆದಿಲ್ಲ. ನನಗೆ ಇಂತದೇ ಜಾಗದಲ್ಲಿ ವ್ಯಾಪಾರ ಮಾಡಬೇಕು ಎಂದು ಯಾರು ಸಹ ಜಾಗವನ್ನು ಗುರುತಿಸಿ ಕೊಟ್ಟಿಲ್ಲ. ನನ್ನ ಬಳಿ ಬಟ್ಟೆಗಳನ್ನು ಖರೀದಿ ಮಾಡಿದ ಎಲ್ಲಾ ಗ್ರಾಹಕರನ್ನು ಗುರುತಿಸಲು ಸಾಧ್ಯವಿಲ್ಲ. ನನ್ನ ಬಳಿ ಪದೇ ಪದೇ ಬಟ್ಟೆಗಳನ್ನು ಖರೀದಿ ಮಾಡುವ ಗ್ರಾಹಕರನ್ನು ಗುರುತಿಸಲು ಆಗುವುದಿಲ್ಲ. ಯಾರು ಯಾರು ನನ್ನ ಬಳಿ ಯಾವ ಬಟ್ಟೆ ಖರೀದಿ ಮಾಡಿದ್ದಾರೆ ಎಂದು ನೆನಪಿರುತ್ತದೆ. ಎಂ.ಓ *9, 13* ಮತ್ತು *14* ಹ್ಯಾಂಡ್ ಗ್ಲೌಸ್ ಗಳನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಅದನ್ನು ಕೊಟ್ಟ ಬಳಿಕ ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. *1* ಮತ್ತು *2* ನೇ ಆರೋಪಿತರನ್ನು ನನಗೆ ತೋರಿಸಿದಾಗ ಆ ಹ್ಯಾಂಡ್ ಗ್ಲೌಸ್ ಗಳನ್ನು ಪೋ.ಠಾಣೆಯಲ್ಲಿ ನನಗೆ ತೋರಿಸಿದ್ದರು. ಆ ಕಾಲಕ್ಕೆ ಆ ಹ್ಯಾಂಡ್ ಗ್ಲೌಸ್ ಅನ್ನು ಯಾವುದೋ ಒಂದು ಕವರ್ ನಲ್ಲಿ ಅಥವಾ ಬಟ್ಟೆಯಲ್ಲಿ ಹಾಕಿದ್ದನ್ನು ನನಗೆ ತೊರಿಸಿದ್ದರು. ಯಾವ ದಿನಾಂಕದಂದು ಅಥವಾ ತಿಂಗಳಿನಲ್ಲಿ ಆ ರೀತಿ ನನಗೆ ತೋರಿಸಿದ್ದರು ಎಂದು ನೆನಪಿಲ್ಲ.

*4.* ಹ್ಯಾಂಡ್ ಗ್ಲೌಸ್ ಅನ್ನು ತೋರಿಸಿದ ದಿನವೇ *1* ಮತ್ತು *2* ನೇ ಆರೋಪಿತರನ್ನು ನನಗೆ ಪೋ.ಠಾಣೆಯಲ್ಲಿ ನನಗೆ ತೋರಿಸಿದ್ದರು. ಆ ದಿನಕ್ಕಿಂತ ಒಂದು ವಾರದ ಮುಂಚೆ ಪೋಲೀಸರು ನನ್ನನ್ನು ಒಲಂಪಿಯಾ ತಿಯೇಟರ್ ಬಳಿ ಭೇಟಿ ಮಾಡಿದ್ದರು. ಆ ಕಾಲಕ್ಕೆ ನನ್ನ ಅಂಗಡಿ ಬಳಿ ಯಾವುದೇ ಬರವಣಿಗೆ ಮಾಡಿರಲಿಲ್ಲ. ಪೋಲೀಸರು ನನ್ನ ಅಂಗಡಿ ಬಳಿ ಬಂದಾಗ ಹ್ಯಾಂಡ್ ಗ್ಲೌಸ್ ಗಳನ್ನು ನಾನು ನೋಡಿರಲಿಲ್ಲ. ಆ ಕಾಲಕ್ಕೆ ನನ್ನ ಹೇಳಿಕೆಯನ್ನು ಪಡೆದಿದ್ದರು. ಹ್ಯಾಂಡ್ ಗ್ಲೌಸ್ ಗಳ ಮೇಲೆ ಯಾವುದೇ ಗುರುತು ಅಥವಾ ಕಂಪನಿ ಹೆಸರು ಇಲ್ಲ. ಎಂ.ಒ *9* ಮತ್ತು *14* ಎಂದು ಗುರುತಿಸಿರುವ ಹ್ಯಾಂಡ್ ಗ್ಲೌಸ್ ಗಳನು ಬೇರೆ ಬೇರೆ ಬಣ್ಣದವು ಎಂದರೆ ನಿಜ. ಆ *4* ಹ್ಯಾಂಡ್ ಗ್ಲೌಸ್ ಗಳನ್ನು ಪೋ.ಠಾಣೆಯಲ್ಲಿ ನೋಡಿದಾಗ ಅವುಗಳ ಮೇಲೆ ಯಾವುದೇ ಗುರುತಿನ ಚೀಟಿಗಳನ್ನು ಅಂಟಿಸಿರಲಿಲ್ಲ. ಆ ಕಾಲಕ್ಕೆ ನನ್ನ ಸಮಕ್ಷಮ ಬರವಣಿಗೆ ಮಾಡಿಲ್ಲ ಮತ್ತು ನನ್ನ ಸಹಿ ಪಡೆದಿಲ್ಲ. ಪೋ.ಠಾಣೆಯಲ್ಲಿ ಆ ಕಾಲಕ್ಕೆ ಬೇರೆ ಯಾರು ಹಾಜರಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಎಂ.ಒ *15* ರಿಂದ *18* ಎಂದು ಗುರುತಿಸಿರುವ ಬಟ್ಟೆಗಳನ್ನು ನನ್ನ ಅಂಗಡಿಯಲ್ಲಿ ಖರೀದಿ ಮಾಡಿಲ್ಲ ಎಂದರೆ ನಿಜ. ಆ ಬಟ್ಟೆಗಳನ್ನು ಆರೋಪಿತರು ಧರಿಸಿದ್ದ ಬಗ್ಗೆ ಮತ್ತು ನಾನು ಅವುಗಳನ್ನು ನೋಡಿದ ಬಗ್ಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ.

*5.* ಆ ತರಹದ ಹ್ಯಾಂಡ್ ಗ್ಲೌಸ್ ಗಳು ಒಲಂಪಿಯಾ ತಿಯೇಟರ್ ಬಳಿ ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತವೆ ಎಂದರೆ ನಿಜ. ಮೊದಲ ಬಾರಿಗೆ ನನ್ನನ್ನು ಭೇಟಿ ಮಾಡಿದ ಪೋ.ಅಧಿಕಾರಿಗಳ ಹೆಸರು ನೆನಪಿಲ್ಲ. ಆ ಕಾಲಕ್ಕೆ ಇಬ್ಬರು ಪೋಲೀಸರು ನನ್ನ ಬಳಿ ಬಂದಿದ್ದರು ಆ ಕಾಲಕ್ಕೆ ಅವರು ಪೋ.ಠಾಣೆಗೆ ಬರುವಂತೆ ನೋಟೀಸ್ ಕೊಟ್ಟಿರಲಿಲ್ಲ. ಆ ಕಾಲಕ್ಕೆ ಹ್ಯಾಂಡ್ ಗ್ಲೌಸ್ ಗಳನ್ನು ಗುರುತಿಸಲು ಪೋ.ಠಾಣೆಗೆ ಬರಬೇಕು ಎಂದು ಹೇಳಿದ್ದರು. ಆ ದಿನ ಬಂದಿದ್ದ

ಪ್ರೋ.ಅಧಿಕಾರಿಗಳಿಗೆ ನನ್ನ ಪರಿಚಯ ಇಲ್ಲ. ಒಲಂಪಿಯಾ ತಿಯೇಟರ್ ಬಳಿ ಅಂದಾಜು 100 ಅಂಗಡಿಗಳು ಇವೆ ಎಂದರೆ ನಿಜ. 1 ಮತ್ತು 2 ನೇ ಆರೋಪಿತರನ್ನು ಈ ದಿನವೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ಮೊದಲು ಪ್ರೋ.ಠಾಣೆಯಲ್ಲಿ ನೋಡಿದ್ದೆ. 1 ಮತ್ತು 2 ನೇ ಆರೋಪಿತರು ನನ್ನಿಂದ ಹ್ಯಾಂಡ್ ಗ್ಲೌಸ್ ಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು 2 ನೇ ಆರೋಪಿತರು 1 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲುನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

**3 ರಿಂದ 5 ನೇ ಆರೋಪಿತರ ಪರ ವಕೀಲರು 1 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲುನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.**

*ಮರು ವಿಚಾರಣೆ:- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು